**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 26.03.2026:</u>**

**<u>ಮುಂದುವರೆದ ಮುಖ್ಯ ವಿಚಾರಣೆಃ</u>**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳನ್ನು ನಾನೇ ಬರೆಸಿದ್ದು ಸದರಿ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಪ್ರಮಾಣಪತ್ರದಲ್ಲಿ ನಾನು ನನ್ನ ಸಹಿ ಮಾಡಿರುತ್ತೇನೆ.

**<u>ಪಾಟೀಸವಾಲುಃ 3ನೇ ಎದುರುದಾರರ ಪರ ವಕೀಲರಿಂದಃ</u>**

ನಾನು ಹೈಸ್ಕೂಲ್ ಓದಿರುತ್ತೇನೆ. ಕನ್ನಡ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನಾನು, ಜಯಣ್ಣ, ಪ್ರಕಾಶ, ಮರುಳಮ್ಮ ಒಂದೇ ಕುಟುಬದ ಸದಸ್ಯರೆಂದರೆ ಸರಿ.

2.ಪ್ರಕಾಶ್ ರವರು ಅರಸೀಕೆರೆ ನ್ಯಾಯಾಲಯದಲ್ಲಿ ಓಎಸ್ 39/17ರಂತೆ ನನ್ನ ಮತ್ತು ನನ್ನ ಸಹೋದರಿ ಮತ್ತು ಇನ್ನೋರ್ವ ಸಹೋದರನ ಮೇಲೆ ಸಲ್ಲಿಸಿದ ದಾವೆ ಅವರ ಪರ ಡಿಕ್ರಿಯಾಗಿದೆ ಎಂದರೆ ನಿಜ. ಆ ತೀರ್ಪನ್ನು ಪ್ರಶ್ನಿಸಿ ನಾನು ಹಾಸನದ 5ನೇ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು ಅದು ಈಗಲೂ ಚಾಲ್ತಿಯಲ್ಲಿದೆ ಎಂದರೆ ನಿಜ. ಓಎಸ್ 39/17ರಲ್ಲಿ ನಾನು ಮತ್ತು ನನ್ನ ತಂದೆ ನಡುವೆ ಓ ಎಸ್ 247/16ರಲ್ಲಿ ಮಾಡಿಕೊಂಡ ರಾಜಿ ಡಿಕ್ರಿ ಬದ್ಧ ಅಲ್ಲ ಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ಓಎಸ್ 39/17ರಲ್ಲಿ ಒಳಗೊಂಡ ಎಲ್ಲಾ ಆಸ್ತಿಗಳು ವೀರಭದ್ರಪ್ಪನವರ ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸಾಕ್ಷಿಯು ನನ್ನ ತಂದೆ ಖರೀದಿಸಿದ ಆಸ್ತಿಗಳು ಎನ್ನುತ್ತಾರೆ. ನನ್ನ ತಂದೆ ಯಾವುದೇ ಸರ್ಕಾರಿ ಹುದ್ದೆಯಲ್ಲಿ ಇರಲಿಲ್ಲ ಎಂದರೆ ಸರಿ. ಅವರು ರೈತಾಪಿ ಎಂದರೆ ನಿಜ. ಓಎಸ್ 39/17ರ ತೀರ್ಪಿನಂತೆ ಪರಿಹಾರದ ಹಣವನ್ನು ಹಂಚಿಕೊಳ್ಳಲು ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ. ಎಲ್ಲರಿಗೂ ಸಮಭಾಗವಾಗಿ ಹಣ ಹಂಚಿಕೆಯಾಗಬೇಕೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**